ಅಂಗೈಯಲ್ಲಿನ ಮೊಬೈಲ್ ಫೋನು ಅಂಗಡಿಯ ಸ್ವರೂಪ ಪಡೆದುಕೊಂಡಿದೆ. ಭೌತಿಕ ರೂಪದಲ್ಲಿರುವ ಹಣ ಡಿಜಿಟಲ್ ಸ್ವರೂಪ ಪಡೆದುಕೊಂಡಿದೆ. ಕೊರೊನಾ ಕಾಲಘಟ್ಟ ಸಾಕಷ್ಟು ಬಿಡುವನ್ನೂ ದಯಪಾಲಿಸಿದೆ. ಕೊಳ್ಳುವ ಪ್ರವೃತ್ತಿಗೆ ನೀರೆರೆಯಲು ಇನ್ನೇನು ಬೇಕು? ಉಂಡೂ ಉಂಡೂ ರೋಗ ತಂದುಕೊಳ್ಳುವಂತೆ, ಕೊಂಡೂ ಕೊಂಡೂ ಗುಡ್ಡೆ ಹಾಕಿಕೊಳ್ಳುವುದೂ ಒಂದು ರೋಗವೇ. ಯಾವ ವಸ್ತು ನಮಗೆ ಅಗತ್ಯ, ಯಾವುದು ಅನಗತ್ಯ ಎನ್ನುವ ವಿವೇಚನೆ ಇಲ್ಲದೆ ಹೋದಾಗ, ಮನೆಯಲ್ಲಿ ಜೀವಂತ ಮನುಷ್ಯರಿಗಿಂತಲೂ ಹೆಚ್ಚಿನ ಆದ್ಯತೆ ನಿರ್ಜೀವ ವಸ್ತುಗಳಿಗೆ ದೊರೆಯುತ್ತದೆ. ಶಾಪಿಂಗ್ ಎನ್ನುವುದು ಅಗತ್ಯಕ್ಕೆ ತಕ್ಕಂತಿದ್ದಾಗ ಅದು ಹಿತವಾಗಿರುತ್ತದೆ, ಹದ ತಪ್ಪಿದಾಗ ಹೊರೆಯಾಗಿ ಪರಿಣಮಿಸುತ್ತದೆ. ಶಾಪಿಂಗ್ ಜಗತ್ತಿನ ಹೊಸ ಒಲವುಗಳ ವಿಶ್ಲೇಷಣೆಯ ನೆಪದಲ್ಲಿ, ಕೊಳ್ಳುವ ಪ್ರವೃತ್ತಿಯ ಸಾಧಕ ಬಾಧಕಗಳ ಬಗ್ಗೆ ಈ ಸಂಚಿಕೆಯ 'ಸುಧಾ' ವಿಶೇಷ ಲೇಖನ ಗಮನಸೆಳೆಯುತ್ತದೆ.

■ ಕಾವ್ಯಶ್ರೀ ಎನ್.

# ಕೊಂಡೂ ಕೊಂಡೂ ಕಿಷ್ಕಿಂಧೆ

